ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು–560001

**-ಸುತ್ತೋಲೆ-**

ಸಂಖ್ಯೆ: CPIBM-53-ಇ-ಆಡಳಿತ-2020 ದಿನಾಂಕ: 15-06-2021

ವಿಷಯ: ಗ್ರೂಪ್-ಬಿ ಅಧಿಕಾರಿಗಳ ವಾರ್ಷಿಕ ಕಾರ್ಯನಿರ್ವಹಣಾ ವರದಿಯನ್ನು ಆನ್ ಲೈನ್ ತಂತ್ರಾಂಶ**(SPARROW)**ದಲ್ಲಿ ಅಳವಡಿಸಲು ಅಗತ್ಯವಾದ ಇ-ಮೇಲ್ ಸೃಜನೆಗಾಗಿ ಮಾಹಿತಿ ಒದಗಿಸುವ ಬಗ್ಗೆ

ಉಲ್ಲೇಖ: 1. ಸರ್ಕಾರದ ಅಧೀನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ರವರ ಪತ್ರ ಸಂಖ್ಯೆ: ಸಿಆಸುಇ 124 ಕತವ 2019
2. ಅಧಿಸೂಚನೆ ಸಂಖ್ಯೆ: ಸಿಆಸುಇ 26 ಎಸ್.ಸಿ.ಆರ್ 2020 ದಿನಾಂಕ: 15-07-2020

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಗಳ ಅನ್ವಯ ಇಲಾಖೆಯ ವಿವಿಧ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರೂಪ್-ಬಿ ಅಧಿಕಾರಿಗಳ ವಾರ್ಷಿಕ ಕಾರ್ಯನಿರ್ವಹಣಾ ವರದಿಗಳ ಮೌಲ್ಯಮಾಪನವನ್ನು ಹಸ್ತಚಾಲಿತ ವ್ಯವಸ್ಥೆಯಲ್ಲಿ (manual system) ನಿರ್ವಹಿಸಲಾಗಿತ್ತಿದೆ. ಪ್ರಸ್ತುತ ಹಸ್ತಚಾಲಿತ ವ್ಯವಸ್ಥೆಯಲ್ಲಿ ಗ್ರೂಪ್-ಬಿ ವೃಂದದ ಅಧಿಕಾರಿಗಳ ಕಾರ್ಯನಿರ್ವಹಣಾ ವರದಿಗಳ ಮೌಲ್ಯಮಾಪನವು ನಿಗಧಿತ ಅವಧಿಯಲ್ಲಿ / ಪಾರದರ್ಶಕತೆಯಿಂದ ಆಗದೇ ಇರುವುದನ್ನು ಗಮನಿಸಿ. ಕಾರ್ಯನಿರ್ವಹಣಾ ವರದಿಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಇ-ಪರ್ಫಾಮೆನ್ಸ್ ರಿಪೋರ್ಟಿಂಗ್ ಸಿಸ್ಟಮ್(e-PRS e-Performance Reporting Sysytem)(SPARROW)ನ ಮೂಲಕ ದಾಖಲಿಸಲು ತಿರ್ಮಾನಿಸಿದೆ.

ಆನ್ ಲೈನ್ ನಲ್ಲಿ ಕಾರ್ಯನಿರ್ವಹಣಾ ವರದಿಗಳನ್ನುಅಳವಡಿಸುವ ಸಲುವಾಗಿ ಎನ್.ಐ.ಸಿ ವತಿಯಿಂದ ಅಭಿವೃದ್ಧಿಗೊಳಿಸಿರುವ SPARROW ತಂತ್ರಾಂಶವನ್ನು ಬಳಸಲು ಉದ್ದೇಶಿಸಲಾಗಿದೆ. ಈ ಸಂಬಂಧವಾಗಿ ಎಲ್ಲಾ ಗ್ರೂಪ್-ಬಿ ಅಧಿಕಾರಿಗಳಿಗೂ ಸರ್ಕಾರದ ವತಿಯಿಂದ ಯೂಸರ್ ಐ.ಡಿ ಯನ್ನು ಸೃಜಿಸಬೇಕಾಗಿದೆ. ಈವರೆಗೆ ಸೃಜಿಸಿರುವ ಯೂಸರ್ ಐ.ಡಿ ಈ ಪತ್ರದೊಂದಿಗೆ ಲಗತ್ತಿಸಲಾಗಿದೆ. ಆದ್ದರಿಂದ ತಮ್ಮ ಜಿಲ್ಲೆಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಗ್ರೂಪ್-ಬಿ ಅಧಿಕಾರಿಗಳ (ಸಿ.ಟಿ.ಇ, ಡಯಟ್, ಅಕ್ಷರ ದಾಸೋಹ, ಜಿಲ್ಲಾ ಪಂಚಾಯತ್ ಮತ್ತು ಕ್ಷೇತ್ರಶಿಕ್ಷಣಾಧಿಕಾರಿಗಳು ಹಾಗೂ ಉಪನಿರ್ದೇಶಕರ ಕಛೇರಿಗಳನ್ನು ಒಳಗೊಂಡಂತೆ) ಮಾಹಿತಿಯನ್ನು ಪರಿಶೀಲಿಸಿ. ಬಾಕಿ ಇರುವ ಅಧಿಕಾರಿಗಳ ಮಾಹಿತಿಯನ್ನು ಲಗತ್ತಿಸಿರುವ ನಮೂನೆಯಲ್ಲಿ Excel Sheet ಮೂಲಕ tdsegov@gmail.com ಮೇಲ್ ಮಾಡಲು ತಿಳಿಸಿದೆ.

ತಮ್ಮ ನಂಬುಗೆಯ,

ಜಂಟಿ ನಿರ್ದೇಶಕರು(ಆಡಳಿತ)

ಪ್ರತಿಯನ್ನು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ

1. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು
2. ಮಾನ್ಯ ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಗುಲ್ಬರ್ಗಾ
3. ಮಾನ್ಯ ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಧಾರವಾಡ

4. ನಿರ್ದೇಶಕರು, ಡಿ.ಎಸ್.ಆರ್.ಟಿ.ಇ, ಬೆಂಗಳೂರು
5. ನಿರ್ದೇಶಕರು, ಕ.ಪ್ರೌ.ಶಿ.ಪ.ಮಂಡಳಿ, ಬೆಂಗಳೂರು
6. ನಿರ್ದೇಶಕರು, ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ, ಬೆಂಗಳೂರು
7. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು
8. ನಿರ್ದೇಶಕರು, ಸಿಸ್ಲೆಪ್, ಧಾರವಾಡ
9. ವಿಶೇಷಾಧಿಕಾರಿಗಳು ಹಾಗೂ ವಿಭಾಗೀಯ ಸಹನಿರ್ದೇಶಕರು, ಕೇಂದ್ರೀಕೃತ ದಾಖಲಾತಿ ಘಟಕ, ಬೆಂಗಳೂರು
10. ವಿಭಾಗೀಯ ಸಹನಿರ್ದೇಶಕರು, ಮೈಸೂರು ವಿಭಾಗ/ಬೆಳಗಾಂ/ಕಲಬುರ್ಗಿ ವಿಭಾಗ
11. ಸಹನಿರ್ದೇಶಕರು, ಮಧ್ಯಾಹ್ನ ಉಪಹಾರ ಯೋಜನೆ, ಬೆಂಗಳೂರು
12. ಪ್ರಾಂಶುಪಾಲಕರು, ರಾಜ್ಯದ ಎಲ್ಲಾ ಸಿಟಿಇ ಗಳು
13. ಉಪನಿರ್ದೇಶಕರು, ಟಿಬಿಎಫ್
14. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ)
15. ರಾಜ್ಯದ ಎಲ್ಲಾ ಉಪನಿರ್ದೇಶಕರು (ಅಭಿವೃದ್ಧಿ)
16. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು